ಅವನು ಕರೆದರೆ ಓಗೊಡುವಷ್ಟು ಹತ್ತಿರದಲ್ಲಿ ಕಣ್ಣೆದುರೇ ಸುಳಿದಾಡಿಕೊಂಡಿದ್ದ ಎಂದು ದೇವರಾಣೆಗೂ ಆಗ ಕಾವೇರಿ ಕಲ್ಪಿಸಿಕೊಂಡಿರಲಿಲ್ಲ.

★★★

ಗಣಪತಿ ಹಬ್ಬ ಕಳೆದು ವಾರವಾಗಿತ್ತು. ಅವತ್ತು ಭಾನುವಾರ. ಭಾನುವಾರವೇ. ಯಾಕೆಂದರೆ ಮೋಹನ ಮನೆಯಲ್ಲಿದ್ದ. ಮನೆಯವರೆಲ್ಲಾ ಮಧ್ಯಾಹ್ನದ ಊಟ ಮುಗಿಸಿ ಚುಟುಕು ನಿದ್ರೆಗೆ ಸಂದಿದ್ದ ಹೊತ್ತು. 'ನೀನೂ ಒಂದು ಗಳಿಗೆ ಮಲಗ್ಬಾರ್ದನೇ? ಮೂರು ಹೊತ್ತೂ ಕೈಲೊಂದು ಕತೆಪುಸ್ತಕ. ಆ ನಮೂನಿ ಓದ್ತಿದ್ರೆ ಕಣ್ಣು ಎಂತಕ್ಕೆ ಬರುತ್ತೆ?' ದೊಡ್ಡಮ್ಮ ವೃಥಾ ಒಂದು ಮಾತು ಬಿಸಾಕಿ ಪವಡಿಸಲು ಹೋಗಿದ್ದಳು. ಅವತ್ತು ತಾನು ಬಾಯಿ ಬಿಟ್ಟುಕೊಂಡು ಓದುತ್ತಿದ್ದ ಕಾದಂಬರಿಯ ಹೆಸರೂ ನೆನಪಲ್ಲಿದೆ ಕಾವೇರಿಗೆ. ತ್ರಿವೇಣಿಯವರ ಶರಪಂಜರ. ನಾಯಕಿಯ ಹೆಸರಿನೊಡನೆ ತನ್ನ ಸಾಮ್ಯ ಗುರುತಿಸಿ ಎಂತದೋ ವಿಚಿತ್ರ ಪುಳಕ. ಓದುತ್ತಾ, ಓದುತ್ತಾ, ಓದುತ್ತಾ ಇದ್ದಕ್ಕಿದ್ದಂತೆ ಮೋಡ ಕಟ್ಟಿ, ಮಳೆ ಸಣ್ಣಗೆ ಹನಿಯತೊಡಗಿ, ಮಬ್ಬು ಮುಸುಕಿದ್ದು ಒಂದು ಅಡಚಣೆಯಾದಂತೆ ಕಾವೇರಿ ಓದುತ್ತಿದ್ದ ಪುಟದ ಕಿವಿ ಮಡಚಿ ಅಂಗಳದ ಕಡೆ ಒಮ್ಮೆ ಕಣ್ಣು ಹಾಯಿಸಿದ್ದಳು. ಅಂಗಳವೆಲ್ಲಾ ಕೆಮ್ಮಣ್ಣಿನ ಗೊಚ್ಚೆ. ಆಚೆಯ ಹೂದೋಟದಲ್ಲಿ ಅರಳಿ ನಿಂತ ಬಗೆಬಗೆಯ ಪುಷ್ಪಲೋಕ. ನಾನಾ ವರ್ಣದ, ನಾನಾ ಆಕಾರದ ಡೇರೆಹೂಗಳ ಸೂರೆ. ಬೆಳಿಗ್ಗೆ ಹರಿವಾಣಗಟ್ಟಲೆ ಹೂ ಕುಯ್ದು ಸಾಕಾಗಿ ಹಾಗೆಯೇ ಗಿಡಗಳ ಮೇಲೆ ಚಂದಕ್ಕೆಂದು ಬಿಟ್ಟ ಹೂಗಳು ಹನಿಮಳೆಯಲ್ಲಿ ತೋಯ್ದು ಸ್ನಾನ ಮಾಡುತ್ತಿರುವಂತೆ ತೋರುತ್ತಾ, ಅರೇ, ಈ ಪಾಪಿ ಬಟ್ಟೆ ಒಗೆದು ಒಣ ಹಾಕಿದವನು ಅಲ್ಲೇ ಯಾಕೆ ತಂತಿಯ ಮೇಲೆ ಬಿಟ್ಟಿದ್ದಾನೆ? ಮಳೆಗಾಲದ ಮಳೆ ಯಾವ ಹೊತ್ತಿಗೆ ಬೇಕಾದರೂ ಹಿಡಿದು ಬಾರಿಸಬಹುದು ಎಂದು ಗೊತ್ತಿಲ್ಲವಾ? ಬುದ್ಧಿವಂತ. ಭಾನುವಾರವಾದ್ದರಿಂದ ಇರಬೇಕು, ದಿನಬಳಕೆಯ ಬಟ್ಟೆಗಳ ಜೊತೆ ನಾಲ್ಕಾರು ಪ್ಯಾಂಟು, ಶರ್ಟುಗಳೂ ಒಗೆತದ ಮುಖ ಕಂಡಿವೆ. ಅಡಿಕೆಕೊಯ್ಲಿನಲ್ಲಿ ಅಡಿಕೆ ಒಣಗಿಸುವ ಚಪ್ಪರ ಹಾಕಲು ಅಂಗಳದಲ್ಲಿ ಸಾಲು ಹಿಡಿದು ಹಾಕಿದ್ದ ಕಲ್ಲುಕಂಬಗಳಲ್ಲಿ ಕೆಲವಕ್ಕೆ ತಂತಿ ಬಿಗಿದು ಬಟ್ಟೆ ಒಣ ಹಾಕಲು ಮಾಡಿಕೊಂಡಿದ್ದ ವ್ಯವಸ್ಥೆಯಲ್ಲಿ ಪಣತದ ಕೊಟ್ಟಿಗೆಯ ಕಡೆಯ ಒಂದು ಸಾಲು ಅವನ ಬಟ್ಟೆಬರೆ ಒಣಗಿಸಲು ಮೀಸಲಾಗಿ, 'ನೋಡ್ರೀ, ನಿಮ್ಮ ಬಟ್ಟೆ ಒದ್ದೆ ಆಗ್ತಿದೆ' ಎಂದು ಕೂಗಿ ಹೇಳಬೇಕೆಂದು ತುರಿಸಿತು ನಾಲಿಗೆ. 'ನಂಗ್ಯಾಕೆ ಪಾರುಪತ್ಯ? ದೊಡ್ಡಮ್ಮ ಎದ್ದು ಬಂದರೆ ಜಕಣಿ ಬಿಡಿಸ್ತಾಳೆ. ಇವನು ಬಂದ ಮೇಲೆ ಅವಳ ಕಣ್ಗಾವಲು ಹೆಚ್ಚಾಗಿರುವುದಂತೂ ನಿಜ' ಎಂದೂ ಅನಿಸಿತು. ಕಾವೇರಿ ಮತ್ತೆ ಪುಸ್ತಕ ಬಿಚ್ಚಿ ಅಕ್ಷರಗಳಲ್ಲಿ ಕಣ್ಣು ಕೀಲಿಸಿದರೂ ಯಾಕೋ ಮನಸ್ಸಿಗೆ ಮಗ್ನತೆ ಬರಲಿಲ್ಲ. ಪುಸ್ತಕ ಮುಚ್ಚಿ ಮೇಜಿನ ಮೇಲಿಟ್ಟು ಅಂಗಳಕ್ಕಿಳಿದಳು. ಪನ್ನೀರು ಸಿಂಪಡಿಸಿದಂತೆ ಹನಿಮಳೆ ಮುಖಕ್ಕೆ ರಾಚಿ ಪುಲಕವೆಬ್ಬಿಸಿತು. ದೊಡ್ಡ ದೊಡ್ಡ ಹೆಜ್ಜೆ ಹಾಕಿ ಪಣತದ ಕೊಟ್ಟಿಗೆಯ ಮೆಟ್ಟಿಲು ಹತ್ತಿ ಅವನ ಕೋಣೆಯ ಮುಂದೆ ನಿಂತಳು.

"ನಿಮ್ಮ ಬಟ್ಟೆ ಒದ್ದೆ ಆಗ್ತಿದೆ ನೋಡ್ರೀ. ಮಳೆ ಬರ್ತಿದೆ..." ಕರೆದಳು. ಸದ್ದಿಲ್ಲ, ಸುದ್ದಿಯಿಲ್ಲ. ಬಾಗಿಲ ಮೇಲೆ ಕೈಯಿಟ್ಟರೆ ತೆರೆದುಕೊಂಡಿತು ಬಾಗಿಲು. ಅವನು ಗಾಢನಿದ್ದೆಯಲ್ಲಿ ಮುಳುಗಿ ಈ ಲೋಕವನ್ನೇ ಮರೆತಿದ್ದಾನೆ. ಉಸಿರಿಗೆ ಏರಿಳಿವ ಹೊಟ್ಟೆಯ ಮೇಲೆ ತೆರೆದ ಪುಸ್ತಕ ಮಗುಚಿಕೊಂಡಿದೆ. ಎಡಗೈ ಹಗೂರಕ್ಕೆ ಪುಸ್ತಕವನ್ನು ಆಧರಿಸಿದೆ. ಇವಳು ಬಾಗಿಲ ಚಿಲಕ ಹಿಡಿದು ಕಟಕಟಿಸಿದಳು. ಅವನು ಕುಮುಟಿ ಬಿದ್ದು ಕಣ್ಣು ಬಿಟ್ಟ. ಬಾಗಿಲಾಚೆಗೆ ನಿಂತಿದ್ದಾಳೆ